M.V.C. ನಂ. 532-2021
ಪಿ.ಡಬ್ಲ್ಯೂ- 1

**ದಿನಾಂಕಃ 20-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀಎಸ್.ಆರ್.ಹೆಚ್. ಅರ್ಜಿದಾರರ ಪರ ವಕೀಲರಿಂದಃ**

ಈ ದಿನ ನಾನು ನ್ಯಾಯಾಲಯದಲ್ಲಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ ಹಾಗೂ ಸದರಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನವೇ ಆಗಿರುತ್ತವೆ.

ನನ್ನ ಅರ್ಜಿಗೆ ಪೂರಕವಾಗಿ

1) ಸಿದ್ದಾಪುರ ಪೋಲಿಸ ಠಾಣೆಯ ಅಪರಾಧ ಸಂಖ್ಯೆಃ 34/2015 ರ ಪ್ರ.ವ. ವರದಿ ಹಾಗೂ ದೂರಿನ ದೃಢೀಕರಣ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ-1 ಅಂತಾ ಗುರುತಿಸಲಾಯಿತು.
2) ಸಿದ್ದಾಪುರ ಪೋಲಿಸ ಠಾಣೆಯ ಅಪರಾಧ ಸಂಖ್ಯೆಃ 34/2015 ರಲ್ಲಿ ಸಲ್ಲಿಸಿದ ಅಂತಿಮ ವರದಿಯ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ-2 ಅಂತಾ ಗುರುತಿಸಲಾಯಿತು.
3) ಸಿದ್ದಾಪುರ ಪೋಲಿಸ ಠಾಣೆಯ ಅಪರಾಧ ಸಂಖ್ಯೆಃ 34/2015 ರಲ್ಲಿ ಸ್ಥಳ ಪಂಚನಾಮೆಯ ದೃಢೀಕೃತ ನಕಲನ್ನು ನಕಾಶೆಯೊಂದಿಗೆ ಹಾಜರಪಡಿಸಿದ್ದು ಅದನ್ನು ನಿಪಿ-3 ಅಂತಾ ಗುರುತಿಸಲಾಯಿತು.
4) ಅರ್ಜಿದಾರರ ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ-4 ಅಂತಾ ಗುರುತಿಸಲಾಯಿತು.
5) 1 ನೇ ಎದುರುದಾರನ ವಾಹನದ ವಿಮಾ ಪಾಲಸಿಯ ಜೆರಾಕ್ಸ ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ-5 ಅಂತಾ ಗುರುತಿಸಲಾಯಿತು.

6) ಕಸ್ತೂರಭಾ ಹಾಸ್ಪಿಟಲ್, ಮಣಿಪಾಲ ಇವರು ನೀಡಿದ ದಿನಾಂಕಃ 12-04-2015 ರ ಡಿಸ್‌ಚಾರ್ಜ ಬಿಲ್ ಹಾಜರಪಡಿಸಿದ್ದು ಎದುರುದಾರರ ಪರ ವಕೀಲರು ಸದರಿ ಬಿಲ್‌ಗಳನ್ನು ಸೃಷ್ಠಿಸಿ ಹಾಜರಪಡಿಸಿದೆ ಅಂತಾ ತಕರಾರು ಮಾಡಿದ್ದರಿಂದ, ಅದನ್ನು ತಕರಾರಿಗೆ ಒಳಪಟ್ಟು ಅದನ್ನು ನಿಪಿ-6 ಅಂತಾ ಗುರುತಿಸಲಾಯಿತು.

7) ಕಸ್ತೂಭಾ ಹಾಸ್ಪಿಟಲ್,ಮಣಿಪಾಲ ಇವರು ನೀಡಿದ ದಿನಾಂಕಃ27-04-2015 ರ ಡಿಸ್‌ಚಾರ್ಜ ಬಿಲ್ ಹಾಜರಪಡಿಸಿದ್ದು ಎದುರುದಾರರ ಪರ ವಕೀಲರು ಸದರಿ ಬಿಲ್‌ಗಳನ್ನು ಸೃಷ್ಠಿಸಿ ಹಾಜರಪಡಿಸಿದೆ ಅಂತಾ ತಕರಾರು ಮಾಡಿದ್ದರಿಂದ, ಅದನ್ನು ತಕರಾರಿಗೆ ಒಳಪಟ್ಟು ಅದನ್ನು ನಿಪಿ-7 ಅಂತಾ ಗುರುತಿಸಲಾಯಿತು.

8) ಕಸ್ತೂರ-ಭಾ ಹಾಸ್ಪಿಟಲ್, ಮಣಿಪಾಲ ಇವರು ನೀಡಿದ ದಿನಾಂಕಃ 23-12-2016 ರ ಡಿಸ್‌ಚಾರ್ಜ ಬಿಲ್ ಹಾಜರಪಡಿಸಿದ್ದು ಎದುರುದಾರರ ಪರ ವಕೀಲರು ಸದರಿ ಬಿಲ್‌ಗಳನ್ನು ಸೃಷ್ಠಿಸಿ ಹಾಜರಪಡಿಸಿದೆ ಅಂತಾ ತಕರಾರು ಮಾಡಿದ್ದರಿಂದ, ಅದನ್ನು ತಕರಾರಿಗೆ ಒಳಪಟ್ಟು ಅದನ್ನು ನಿಪಿ-8 ಅಂತಾ ಗುರುತಿಸಲಾಯಿತು.

9) 3 ಪೇಮೆಂಟ್ ರಸೀದಿಗಳನ್ನು ಹಾಜರಪಡಿಸಿದ್ದು ಎದುರುದಾರರ ಪರ ವಕೀಲರು ಸದರಿ ಬಿಲ್‌ಗಳನ್ನು ಸೃಷ್ಠಿಸಿ ಹಾಜರಪಡಿಸಿದೆ ಅಂತಾ ತಕರಾರು ಮಾಡಿದ್ದರಿಂದ, ಅದನ್ನು ತಕರಾರಿಗೆ ಒಳಪಟ್ಟು ಒಟ್ಟಾಗಿ ನಿಪಿ-9 ಅಂತಾ ಗುರುತಿಸಲಾಯಿತು.

10) 57 ಮೆಡಿಕಲ್ ಬಿಲ್‌ಗಳನ್ನು ಹಾಜರಪಡಿಸಿದ್ದು ಎದುರುದಾರರ ಪರ ವಕೀಲರು ಸದರಿ ಬಿಲ್‌ಗಳನ್ನು ಸೃಷ್ಠಿಸಿ ಹಾಜರಪಡಿಸಿದೆ ಅಂತಾ ತಕರಾರು ಮಾಡಿದ್ದರಿಂದ, ಅದನ್ನು ತಕರಾರಿಗೆ ಒಳಪಟ್ಟು ಒಟ್ಟಾಗಿ ನಿಪಿ-10 ಅಂತಾ ಗುರುತಿಸಲಾಯಿತು.

11) ಅನ್ನಪೂರ್ಣ ಕೇಟ್ರಸ್, ಕುಮಟಾ ಇವರ 2 ರಸೀದಿಗಳನ್ನು ಹಾಜರಪಡಿಸಿದ್ದು ಅವುಗಳನ್ನು ಅನುಕ್ರಮವಾಗಿ ನಿಪಿ-11 ಮತ್ತು ನಿಪಿ-12 ಅಂತಾ ಗುರುತಿಸಲಾಯಿತು.

12) ಮಾರುತಿ ಅಟೋ ವರ್ಕ್ಸ್, ಸಿದ್ದಾಪುರ ಇವರು ನೀಡಿದ ಎಸ್ಟೀಮೇಟ್ ಹಾಜರಪಡಿಸಿದ್ದು ಅದನ್ನು ನಿಪಿ-13 ಅಂತಾ ಗುರುತಿಸಲಾಯಿತು.

13) ಜನನಿ ಲಾಡ್ಜ, ಇದರ ರಸೀದಿ ಹಾಜರಪಡಿಸಿದ್ದು ಅದನ್ನು ನಿಪಿ-14 ಅಂತಾ ಗುರುತಿಸಲಾಯಿತು.

14) ಕಿಣಿ ಕ್ಯಾಂಟಿನ್ ಇದರ ರಸೀದಿ ಹಾಜರಪಡಿಸಿದ್ದು ಅದನ್ನು ನಿಪಿ-15 ಅಂತಾ ಗುರುತಿಸಲಾಯಿತು.

15) 2 ಪೇಟ್ರೋಲ್ ರಸೀದಿಗಳನ್ನು ಹಾಜರಪಡಿಸಿದ್ದು ಅದನ್ನು ಅನುಕ್ರಮವಾಗಿ ನಿಪಿ-16 ಮತ್ತು ನಿಪಿ-17 ಅಂತಾ ಗುರುತಿಸಲಾಯಿತು.

18) ರಾಘವೇಂದ್ರ ಕೆಫೆ ಹಾಗೂ ಅನುಪಮಾ ರೇಸ್ಟೋರೆಂಟ್ ಇವರ ರಸೀದಿಯನ್ನು ಹಾಜರಪಡಿಸಿದ್ದು ಅವುಗಳನ್ನು ಅನುಕ್ರಮವಾಗಿ ನಿಪಿ-18 ಮತ್ತು ನಿಪಿ-19 ಅಂತಾ ಗುರುತಿಸಲಾಯಿತು.

19) ಕಸ್ತೂರ-ಭಾ ಆಸ್ಪತ್ರೆ ಇವರ ದಿನಾಂಕಃ 16-01-2016 ರ ರಸೀದಿ ಹಾಜರಪಡಿಸಿದ್ದು ಅದನ್ನು ಎದುರುದಾರರ ಪರ ವಕೀಲರು ಸದರಿ ಬಿಲ್‌ಗಳನ್ನು ಸೃಷ್ಠಿಸಿ ಹಾಜರಪಡಿಸಿದೆ ಅಂತಾ ತಕರಾರು ಮಾಡಿದ್ದರಿಂದ, ಅದನ್ನು ತಕರಾರಿಗೆ ಒಳಪಟ್ಟು ನಿಪಿ-20 ಅಂತಾ ಗುರುತಿಸಲಾಯಿತು.

20) ಒಟ್ಟು 17 ರೇಲ್ವೆ ಟಿಕೇಟ್‌ಗಳನ್ನು ಹಾಜರಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-21 ಅಂತಾ ಗುರುತಿಸಲಾಯಿತು.

21) ಆಸ್ಪತ್ರೆಯವರು ನೀಡಿದ 11 ಪ್ರಿಸ್ಕ್ರಿಪಶನ್‌ಗಳನ್ನು ಹಾಜರಪಡಿಸಿದ್ದು ಎದುರುದಾರರ ಪರ ವಕೀಲರು ಸದರಿ ಬಿಲ್‌ಗಳನ್ನು ಸೃಷ್ಠಿಸಿ ಹಾಜರಪಡಿಸಿದೆ ಅಂತಾ ತಕರಾರು ಮಾಡಿದ್ದರಿಂದ, ಅದನ್ನು ತಕರಾರಿಗೆ ಒಳಪಟ್ಟು ಒಟ್ಟಾಗಿ ನಿಪಿ-22 ಅಂತಾ ಗುರುತಿಸಲಾಯಿತು.

22) ಕಸ್ತೂರ-ಭಾ ಆಸ್ಪತ್ರೆಯವರು ನೀಡಿದ ದಿನಾಂಕಃ 19-12-2016, 21-12-2016 ಹಾಗೂ 11-04-2015 ರ ಅಡವಾನ್ಸ ರಸೀದಿ ಹಾಜರಪಡಿಸಿದ್ದು ಎದುರುದಾರರ ಪರ ವಕೀಲರು ಸದರಿ ಬಿಲ್‌ಗಳನ್ನು ಸೃಷ್ಟಿಸಿ ಹಾಜರಪಡಿಸಿದೆ ಅಂತಾ ತಕರಾರು ಮಾಡಿದ್ದರಿಂದ, ಅವುಗಳನ್ನು ಒಟ್ಟಾಗಿ ತಕರಾರಿಗೆ ಒಳಪಟ್ಟು ಅದನ್ನು ನಿಪಿ-23 ಅಂತಾ ಗುರುತಿಸಲಾಯಿತು.

23) ಕಸ್ತೂರ-ಭಾ ಆಸ್ಪತ್ರೆಯವರು ಇವರು ನೀಡಿದ ದಿನಾಂಕಃ 22-08-2015 ರ ಟ್ರೀಟ್ಮೇಂಟ್ ಸರ್ಟಿಫಿಕೇಟ್ ಹಾಜರಪಡಿಸಿದ್ದು ಅದನ್ನು ನಿಪಿ-24 ಅಂತಾ ಗುರುತಿಸಲಾಯಿತು .

24) ಕಸ್ತೂರ-ಭಾ ಆಸ್ಪತ್ರೆಯವರು ಇವರು ನೀಡಿದ ದಿನಾಂಕಃ 06-07-2015 ರ ಟ್ರೀಟ್ಮೇಂಟ್ ಸರ್ಟಿಫಿಕೇಟ್ ಹಾಜರಪಡಿಸಿದ್ದು ಅದನ್ನು ನಿಪಿ-25 ಅಂತಾ ಗುರುತಿಸಲಾಯಿತು .

25) ವಿಮೆಗೆ ಒಳಪಟ್ಟ ವಾಹನದ ಚಾಲಕನ ಚಾಲನಾ ಪರವಾನಿಗೆ ಪತ್ರದ ನೋಟರೈಸಡ್ ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು ನಿಪಿ-26 ಅಂತಾ ಗುರುತಿಸಲಾಯಿತು.

ಆದ್ದರಿಂದ ನನ್ನ ಅರ್ಜಿಯಲ್ಲಿ ಕೋರಿದಂತೆ ಪರಿಹಾರದ ಹಣವನ್ನು ಕೊಡಿಸಬೇಕಾಗಿ ವಿನಂತಿ.

**<u>ಪಾಟೀ ಸವಾಲುಃ ಶ್ರೀಃ ವಿ.ಎಸ್.ಹೆಚ್. 3 ನೇ ಎದುರುದಾರರ ಪರ ವಕೀಲರಿಂದಃ</u>**

**2.** ಸದರಿ ಅಪಘಾತ ಸಂಭವಿಸಿದಾಗ ನನ್ನ ವಯಸ್ಸು 27 ವರ್ಷ ಇತ್ತು. ನನ್ನ ವಯಸ್ಸು ತೋರಿಸುವ ಕುರಿತು ನಾನು ನನ್ನ ಶಾಲಾ ದಾಖಲಾತಿ ಅಥವಾ ನನ್ನ ಜನ್ಮ ಪ್ರಮಾಣ ಪತ್ರವನ್ನು ಹಾಜರಪಡಿಸಿಲ್ಲ.

**3.** ನಾನು ಪೂಜೆ ಹಾಗೂ ಕೃಷಿಯನ್ನು ಮಾಡುತ್ತೇನೆ. ನಾನು ಕೃಷಿ ಜಮೀನು ಹೊಂದಿದ ಬಗ್ಗೆ ದಾಖಲೆಗಳನ್ನು ಹಾಜರಪಡಿಸಿಲ್ಲ. ನಾನು ಪೂಜೆಯಿಂದ ಪ್ರತಿ ತಿಂಗಳು ರೂ. 20,000/- ವರೆಗೆ ಆದಾಯ ಗಳಿಸುತ್ತಿದ್ದೆ. ನಾನು ದಕ್ಷಿಣೇ

ಪಡೆಯುವುದರಿಂದ ಅದರ ಕುರಿತು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ಅಪಘಾತವಾದ ದಿನ ನಾನು ಗೋದ್ಲಬೆಳೆದಿಂದ ಸಿದ್ಧಾಪುರ ಕಡೆಗೆ ಹೊರಟ್ಟಿದ್ದೆ. ನಾನು ಹೋಗಬೇಕಾಗಿದ್ದ ರಸ್ತೆ ನೇರವಾದ ರಸ್ತೆ ಇತ್ತು ಅಂದರೆ ಸಾಕ್ಷಿಯು ನೇರ ಹಾಗೂ ತಿರುವುಗಳು ಇದ್ದ ರಸ್ತೆ ಇತ್ತು ಅಂತಾ ಹೇಳುತ್ತಾರೆ. ನಾವು ಹೋಗುತ್ತಿದ್ದ ದಾರಿಯಲ್ಲಿ ಎದುರಿಗೆ ಬರುತ್ತಿದ್ದ ವಾಹನಗಳು ಕಾಣುತ್ತಿದ್ದವು ಎಂದರೆ ಸರಿ. ನಮ್ಮ ವಾಹನ ಹಾಗೂ ಓಮಿನಿ ವಾಹನ ಎದುರು-ಬದರು ಡಿಕ್ಕಿ ಆಗಿರುತ್ತವೆ ಎಂದರೆ ಸರಿ. ಓಮಿನಿ ವಾಹನದ ಚಾಲಕನು ಹಾರ್ನ ಮಾಡಿ, ಲೈಟ್ ಹಚ್ಚಿ ಬರುತ್ತಿದ್ದ ಎಂದರೆ ಸುಳ್ಳು. ಅಪಘಾತ ನಡೆದಾಗ ನಾವು ರಸ್ತೆಯ ಮಧ್ಯ ಭಾಗದಲ್ಲಿ ಇದ್ದೆವೂ ಎಂದರೆ ಸುಳ್ಳು. ನಾನು ಚಲಾಯಿಸುತ್ತಿದ್ದ ವಾಹನವು ಎದುರಿಗೆ ಬರುತ್ತಿದ್ದ ವಾಹನಕ್ಕೆ ಅಡೆ-ತಡೆ ಆಗಿತ್ತು ಎಂದರೆ ಸುಳ್ಳು. ನಾನೇ ವಾಹನವನ್ನು ರಸ್ತೆಯ ಮಧ್ಯದಲ್ಲಿ ಚಲಾಯಿಸುತ್ತಿದ್ದುದ್ದರಿಂದ ನನ್ನ ಅಡೆ-ತಡೆಯಿಂದಾಗಿ ಸದರಿ ಅಪಘಾತವಾಗಿರುತ್ತದೆ ಎಂದರೆ ಸುಳ್ಳು. ಅಪಘಾತವಾದ ರಸ್ತೆ 10 ರಿಂದ 15 ಅಡಿ ಅಗಲ ಇರುತ್ತದೆ ಅಂದರೆ ಇರಬಹುದು. ರಸ್ತೆ ಕಿರುದಾಗಿದ್ದರಿಂದ ಎದುರಿಗೆ ಬರುವ ವಾಹನಕ್ಕೆ ದಾರಿ ಕೊಟ್ಟು ನಾನು ಪಕ್ಕಕ್ಕೆ ನಿಲ್ಲಬೇಕಾಗಿತ್ತು ಅಂದರೆ ಸಾಕ್ಷಿ ನಾನು ವಾಹನವನ್ನು ಪಕ್ಕಕ್ಕೆ ನಿಲ್ಲಿಸಿದಾಗ ಅಪಘಾತವಾಗಿರುತ್ತದೆ ಎಂದು ಹೇಳುತ್ತಾರೆ. ನನಗೆ ಅಪಘಾತದಿಂದ ಕುತ್ತಿಗೆಗೆ, ಬಲಗೈ ಮುಂಗೈ ಮುರಿದಿತ್ತು, ದವಡೆಗೆ ಗಾಯವಾಗಿ ಮುರಿತವಾಗಿತ್ತು. ನನಗೆ ಅಪಘಾತದಲ್ಲಿ ಆದ ಗಾಯಗಳು ಸಾದಾ ಸ್ವರೂಪದ ಗಾಯಗಳು ಅಂದರೆ ಸರಿಯಲ್ಲ. ಅಪಘಾತದಲ್ಲಿ ಆದ ಗಾಯಗಳು 15 ದಿನಗಳಲ್ಲಿ ವಾಸಿಯಾಗುವಂತಹ ಗಾಯಗಳು ಆಗಿದ್ದವೂ ಎಂದರೆ ಸರಿಯಲ್ಲ.

**4.** ಅಪಘಾತದ ನಂತರ ನಾನು ಸರ್ಕಾರಿ ಆಸ್ಪತ್ರೆ, ಸಿದ್ಧಾಪುರಕ್ಕೆ ಹೋಗಿರುತ್ತೇನೆ. ಅದೇ ದಿನ ಆಸ್ಪತ್ರೆಯವರು ಅಲ್ಲಿಂದ ನನಗೆ ಮಣಿಪಾಲ್‌ಗೆ ಹೋಗುವಂತೆ ತಿಳಿಸಿರುತ್ತಾರೆ. ನಾನು ಮಣಿಪಾಲ್ ಆಸ್ಪತ್ರೆಯಲ್ಲಿ ಮೊದಲು ಒಂದು ವಾರದ ಕಾಲ ಅಡ್ಮಿಟ್ ಇರುತ್ತೇನೆ. ನಂತರ 20 ನೇ ತಾರೀಖಿಗೆ ಹೋದಾಗ

ಒಂದು ವಾರ, 2016 ರಲ್ಲಿ ಆಗ ಕೂಡಾ ಒಂದು ವಾರಗಳ ಕಾಲ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದೆ. ಮೊದಲ ಬಾರಿಗೆ ನನಗೆ ಎಲ್ಲ ಚಿಕಿತ್ಸೆ ಮುಕ್ತಾಯಗೊಂಡ ನಂತರವೇ ಡಿಸಚಾರ್ಜ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಅಂದರೆ ಮತ್ತೆ ಚಿಕಿತ್ಸೆಗೆ ಕರೆದಿದ್ದರೂ ಅಂತಾ ಹೇಳುತ್ತಾರೆ.

**5.** ಅಪಘಾತದಲ್ಲಿ ನನ್ನ ಹಲ್ಲು ಮುರಿದಿಲ್ಲ, ದವಡೆ ಮುರಿದಿರುತ್ತದೆ. ಸದರಿ ಗಾಯಕ್ಕೆ ಕೇವಲ ಮಾತ್ರೆಗಳನ್ನು ಪಡೆದರೆ ದವಡೆಯ ಗಾಯ ವಾಸಿಯಾಗುತ್ತದೆ ಅಂದರೆ ಸರಿಯಲ್ಲ. ನನಗೆ ಹೆಚ್ಚಿನ ಚಿಕಿತ್ಸೆಯ ಅವಶ್ಯಕತೆ ಇಲ್ಲದಿದ್ದರೂ ಕೂಡಾ ನಾನು ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸುಳ್ಳು.

**6.** ಬಲಗೈ ಮುಂಗೈಗೆ ಆದ ಮುರಿತ ಕೂಡಾ 21 ದಿನಗಳಲ್ಲಿ ವಾಸಿಯಾಗುತ್ತದೆ ಅಂದರೆ ಸರಿಯಲ್ಲ. ನಾನು ಅಪಘಾತಕ್ಕಿಂತ ಮುಂಚೆ ಮಾಡುತ್ತಿದ್ದ ಕೆಲಸಗಳನ್ನು ಈಗಲೂ ಸಹ ಅನಾಯಸವಾಗಿ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**7.** ಸದರಿ ಅಪಘಾತದಿಂದ ನನ್ನ ಮೋಟಾರ ಸೈಕಲ್ ಸಂಪೂರ್ಣ ಹಾಳಾಗಿರುತ್ತದೆ. ನಾನು ನನ್ನ ವಾಹನವನ್ನು ಶೋ ರೂಂನಲ್ಲಿ ರಿಪೇರಿ ಮಾಡಲು ಬರುವುದಿಲ್ಲ ಅಂತಾ ಹೇಳಿದ್ದರಿಂದ, ನಾನು ರಿಪೇರಿ ಮಾಡಿಸಿರುವುದಿಲ್ಲ. ನನ್ನ ಮೋಟರ ಸೈಕಲ್‌ಗೆ ನ್ಯಾಶನಲ್ ಇನ್ಸೂರೆನ್ಸ ಕಂಪನಿಯಿಂದ ವಿಮೆ ಮಾಡಿಸಿದ್ದೆ. ನನ್ನ ವಾಹನಕ್ಕೆ ಯಾವುದೇ ಹಾನಿಯಾಗದೇ ಇರುವುದರಿಂದ ನಾನು ಯಾವುದೇ ವಾಹನಕ್ಕೆ ಪರಿಹಾರ ಕೇಳಿಲ್ಲ ಎಂದರೆ ಸುಳ್ಳು. ನನಗೆ ಅಪಘಾತದಲ್ಲಿ ಯಾವುದೇ ಶಾಶ್ವತ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸುಳ್ಳು. ನನ್ನ ತಪ್ಪಿನಿಂದ ಅಪಘಾತವಾಗಿರುವುದರಿಂದ 3 ನೇ ಎದುರುದಾರ ಪರಿಹಾರ ನೀಡಲು ಬಾಧ್ಯಸ್ಥನಿರುವುದಿಲ್ಲ ಎಂದರೆ ಸುಳ್ಳು. ನಿಪಿ-6 ರಿಂದ ನಿಪಿ-26 ರ ದಾಖಲೆಗಳು ಸುಳ್ಳು ಸೃಷ್ಟಿಸಿ ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಬಿ.ಎಸ್.ಜೆ. 1 ಮತ್ತು 2ನೇ ಎದುರುದಾರರ ಪರ ವಕೀಲರಿಂದಃ**

1 ಮತ್ತು 2ನೇ ಎದುರುದಾರರ ಪರ ವಕೀಲರನ್ನು ಕೂಗಿಸಿದ್ದು, ಯಾರು ಹಾಜರಿರುವುದಿಲ್ಲ. ಹೀಗಾಗಿ ಅವರ ಪರ ಪಾಟೀ ಸವಾಲು ಇಲ್ಲಾ ಅಂತಾ ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ- **20-06-2023**
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.

M.V.C. ನಂ. 532-2021
ಪಿ.ಡಬ್ಲ್ಯೂ - 1